ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಇದರಲ್ಲಿ ಗ್ರಾಂಟ್ ಮತ್ತು ಏಡೆಡ್ ಸ್ಕೂಲುಗಳು ಎಷ್ಟು ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಗ್ರಾಂಟ್-ಇ-ಏಡ್ ಸ್ಕೂಲುಗಳನ್ನೂ ಸರ್ಕಾರಿ ಪ್ರೈಮರಿ ಸ್ಕೂಲುಗಳಂತೆ ಬದಲಾಯಿಸುವುದಕ್ಕೆ ಎಷ್ಟು ದಿನ ಹಿಡಿಯುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಷ್ಟು ದಿನ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—6,244 ಸ್ಕೂಲು ಕಟ್ಟಡಗಳ ಪೈಕಿ ಎಷ್ಟು ಸರ್ಕಾರದ ಮ್ಯಾನೇಜ್‌ಮೆಂಟ್‌ನಲ್ಲಿದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಬಹುಶಃ ಸರ್ಕಾರದವರು ಎಷ್ಟು ಕಟ್ಟಡಗಳನ್ನು ತೆಗೆದುಕೊಂಡು ರಿಪೇರಿ ವಗೈರೆ ಮಾಡುತ್ತಾರೆ ಎಂದು ತಮ್ಮ ಪ್ರಶ್ನೆ ಇರಬಹುದು. ಅದಕ್ಕೆ ಅಂಕಿ ಅಂಶ ಬರಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಸ್ಕೂಲುಗಳನ್ನು ಕಟ್ಟಿಸುವುದರಲ್ಲಿ ಅರ್ಧ ಕಟ್ಟಿಸಿ ನಿಲ್ಲಿಸಿರತಕ್ಕ ಸ್ಕೂಲುಗಳನ್ನು ಕಟ್ಟಿಸುವುದಕ್ಕೆ ಮೊದಲನೆಯ ಪ್ರಾಶಸ್ತ್ಯ ಕೊಡುವುದು ಸೂಕ್ತವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೌದು, ಒಪ್ಪುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈ ಕಟ್ಟಡಗಳಿಗೆಲ್ಲಾ ಮೊದಲು ದುಡ್ಡು ಒದಗಿಸಿದಮೇಲೆ, ಯಾವ ಗ್ರಾಮಗಳವರು ಕಟ್ಟಡಗಳಿಗೆ ದ್ರವ್ಯ ಸಹಾಯವನ್ನೊದಗಿಸಿದ್ದಾರೋ ಅಂಥ ಕಟ್ಟಡಗಳನ್ನು ತೆಗೆದುಕೊಳ್ಳುವುದು ಸೂಕ್ತವಲ್ಲವೇ ?

Sri A. G. RAMACHANDRA RAO.—It is an important matter to be considered.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ಜಿಲ್ಲೆಯಲ್ಲಿ ಒಂದು ಸಮಿತಿಯನ್ನು ಏರ್ಪಾಡುಮಾಡಿದ್ದೀರಲ್ಲಾ, ಆ ಸಮಿತಿಯವರು ಯಾವ ರಾಜಕೀಯ ಭಾವನೆಯನ್ನೂ ಗಮನದಲ್ಲಿಟ್ಟುಕೊಳ್ಳದೆ ಈ ನಿಯಮವನ್ನು ಪಾಲಿಸುವುದನ್ನು ಕಡ್ಡಾಯ ಮಾಡುತ್ತೀರಾ ?

Sri A. G. RAMACHANDRA RAO.—Yes. Government will seriously consider it.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ದುಡ್ಡಿನ ಅಭಾವ ಎಂದು ಹೇಳಿದಿರಿ. ಸರ್ಕಾರದವರು 1,500 ರೂಪಾಯಿಗಳನ್ನು ಕೊಡುವುದು, ಮಿಕ್ಕ ಭಾಗವನ್ನು ಗ್ರಾಮಸ್ಥರು ಕೊಡುವುದು—ಆ ಹಣವನ್ನು ಒಟ್ಟು ಸೇರಿಸಿ ಕಟ್ಟಡ ಕಟ್ಟಿಸುವುದು ಎಂದು ನೀವು ಸ್ಕೀಮ್ ಮಾಡಿಕೊಂಡಿರುವ ಪ್ರಕಾರ ನಿಮ್ಮ ಪಾಲಿನ 1,500 ರೂಪಾಯಿಗಳನ್ನು ಮೊದಲೇ ಕೊಟ್ಟುಬಿಟ್ಟು ಗ್ರಾಮಸ್ಥರ ಮೇಲೆಯೇ ಕಟ್ಟಡವನ್ನು ಕಟ್ಟಿಸುವ ಜವಾಬ್ದಾರಿಯನ್ನು ಹಾಕುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಯೋಚನೆ ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡರು (ಮುಳಬಾಗಿಲು-ಶ್ರೀನಿವಾಸಪುರ) —ಪ್ರೈಮರಿ ಸ್ಕೂಲುಗಳನ್ನು ಕೊಡುವುದು ಯಾವ ಬೇಸಿಸ್ ಮೇಲೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಆ ಊರಿನ ಆವಶ್ಯಕತೆ, ಸೌಕರ್ಯ—ಇವುಗಳ ಮೇಲೆ.

ಶ್ರೀ ಜಿ. ನಾರಾಯಣಗೌಡರು.—ಆವಶ್ಯಕತೆ, ಸೌಕರ್ಯ ಎಲ್ಲವನ್ನೂ ನೋಡಿಯೇ ಈಗ ಎಲ್ಲಾ ಕಡೆಯಲ್ಲೂ ಸ್ಯಾಂಕ್ಷನ್ ಮಾಡುತ್ತಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇದಕ್ಕಾಗಿ ಸರ್ಕಾರದಲ್ಲಿ ಎಷ್ಟು ಹಣವಿದೆ ಅಷ್ಟನ್ನೂ ಉಪಯೋಗಿಸಲಾಗಿದೆ.

ಶ್ರೀ ಜಿ. ನಾರಾಯಣಗೌಡರು.—ಪ್ರೈಮರಿ ಸ್ಕೂಲು ಕಟ್ಟಡಗಳನ್ನು ಕಟ್ಟಿಸಿಕೊಡುವುದರಲ್ಲಿ ಯಾರು ಹಣವನ್ನು ಡಿಪಾಸಿಟ್ ಮಾಡಿದ್ದಾರೋ ಅವರಿಗೆ ಹೆಚ್ಚಿಗೆ preference ಕೊಟ್ಟು ಕಟ್ಟಿಸುವುದು ನ್ಯಾಯವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು).—ಹಳ್ಳಿಯವರು ಕಟ್ಟಡ ಕಟ್ಟಿಸುವುದರಲ್ಲಿ ಆಗುವ ಖರ್ಚಿನಲ್ಲಿ $\frac{1}{3}$ ಭಾಗದ ಖರ್ಚನ್ನು ಸರ್ಕಾರದವರು ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಯೋಚನೆ ಮಾಡುತ್ತೇವೆ.

Financial Aid by Central Government to increase food production and expenditure incurred.

Q.—469. **Sri D. R. KARI GOWDA** (Hassan).—

Will the Government be pleased to state :—

(*a*) the amounts granted by the Government of India to the Mysore State for increasing food production during 1948-49, 1949-50, 1950-51 and 1951-52 ;

(*b*) the amounts spent during the respective years ;

(*c*) of the amounts so spent, the expenditure incurred on salaries, agricultural implements, manure and irrigation facilities (details to be furnished in respect of each year and each item) ?

A.—**Sri H. SIDDAVEERAPPA** (Minister for Home Affairs and Agriculture).—

(*a*) Grants and Loan from the Government of India—

Year.	*Grant.*	*Loan.*
	Rs.	Rs.
1948-49	Nil	Nil
1949-50	51,02,269	29,50,000
1950-51	38,00,538	90,00,000
1951-52	68,80,79	60,50,000

(*b*) Expenditure—

1948-49 ... ... Does not arise in view of reply to (*a*)

	Rs.	
1949-50	80,17,880	
1950-51	99,90,530	
1951-52	38,76,707	(from April 1951 to February 1952).

(*c*) 1. Salaries—

	1949-50	*1950-51*	*1951-52*
	Rs.	Rs.	Rs.
(i) Establishment of the Deputy Director of Agriculture for G.M.F.	39,988	27,914	36,547
(ii) Establishment of the Statistical Section.	34,626	33,704	37,224
(iii) Establishment for the distribution of seeds, manure and implements in Taluk and Circle levels.	2,29,6633	...	...

2. Agricultural Implements—

No funds for the purchase of iron and steel and implements out of grants and loans granted by the Government of India.

3. Manure—

	Rs.	
1948-49 ...	1,24,586	Grants from the Government of India
1949-50 ...	1,48,528	are not given for these years.
1950-51 ...	3,55,161	
1951-52 ...	5,57,959	(Up to end of February 1952.)

4. Irrigation facilities—

	Rs.	
1949-50 ...	59,20,597	
1950-51 ...	88,43,308	
1951-52 ...	27,85,644	(From April 1951 to February 1952).

ಶ್ರೀ ಡಿ. ಆರ್. ಕರಿಗೌಡರು.—(a) ಪ್ರಶ್ನೆಯಲ್ಲಿ 1948ರಿಂದ 1952ರ ವರೆಗೂ ಇಂಡಿಯಾ ಸರ್ಕಾರದವರು ಒಟ್ಟು 337 ಲಕ್ಷ ರೂಪಾಯಿಗಳನ್ನು ಗ್ರಾಂಟುಗಳು ಮತ್ತು ಸಾಲಗಳ ರೂಪದಲ್ಲಿ ಒದಗಿಸಿದ್ದಾರೆಂದೂ, ಅದರಲ್ಲಿ 217 ಲಕ್ಷ ರೂಪಾಯಿಗಳು ಖರ್ಚಾಗಿವೆಯೆಂದೂ (b) ನಲ್ಲಿ ತಿಳಿಸಿದ್ದಾರೆ. ಉಳಿದ ಹಣವೇನಾಯಿತು? ಲ್ಯಾಪ್ಸ್ ಆಯಿತೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ; ಸರ್ಕಾರದವರ ಹತ್ತಿರ ಇದೆ.

ಶ್ರೀ ಡಿ. ಆರ್. ಕರಿಗೌಡರು.—ಖರ್ಚುಮಾಡುವುದಕ್ಕೆ ದಾರಿಯೇನೂ ತೋರಲಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಹಾಗಲ್ಲ. ಕೆಲವು works ನ್ನು ಮಂಜೂರುಮಾಡಿದ್ದೇವೆ; ಇನ್ನು ಕೆಲವಕ್ಕೆ ಸ್ಕೀಂ ಮಾಡಿದ್ದೇವೆ. ಆದರೆ ಅನೇಕ ಸಂದರ್ಭಗಳಲ್ಲಿ for want of materials and for other reasons works will be held up and I may assure the Hon'ble Member that every pie will be spent for the purpose for which it is allocated.

ಶ್ರೀ ಡಿ. ಆರ್. ಕರಿಗೌಡರು.—(c) ಪ್ರಶ್ನೆಗೆ ಉತ್ತರದಲ್ಲಿ ಗೊಬ್ಬರವನ್ನು ಕೊಡುವುದಕ್ಕಾಗಿ 11 ಲಕ್ಷ 86 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದೀರೆಂದು

(ಶ್ರೀ ಡಿ. ಆರ್. ಕರಿಗೌಡರು).

ಹೇಳಿದ್ದೀರಿ. ಗೊಬ್ಬರವನ್ನು ಮುಫತ್ತಾಗಿ ಕೊಟ್ಟಿದೆಯೋ ಅಥವಾ ಖರೀದಿಗೆ ಕೊಟ್ಟಿದೆಯೋ ?

Sri H. SIDDAVEERAPPA.—Sometimes at subsidised rates, ಕೊಟ್ಟಿದೆ.

ಶ್ರೀ ಡಿ. ಆರ್. ಕರಿಗೌಡರು.—ಸಬ್ಸಿಡೈಸ್ಡ್ ರೇಟ್ಸ್ ಎಂದರೆ ಹೇಗೆ ? ಹೆಚ್ಚಿಗೆ ದರಕ್ಕೆ ಕೊಂಡುಕೊಂಡು ರೈತರಿಗೆ ಕಡಮೆ ಬೆಲೆಗೆ ಕೊಟ್ಟಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—ಹಾಗಲ್ಲ; ಸರ್ಕಾರದವರು ಲಾಭಮಾಡಿಕೊಳ್ಳುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡರು.—ನೀರಾವರೀ ಸೌಕರ್ಯಕ್ಕಾಗಿ 1 ಕೋಟಿ 78 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಹೇಳಿದ್ದೀರಿ. ಯಾವ್ಯಾವ ಡಿಸ್ಟ್ರಿಕ್ಟಿಗೆ ಎಷ್ಟೆಷ್ಟು ಕೊಟ್ಟಿದ್ದೀರೆಂಬುದನ್ನು ಹೇಳುತ್ತೀರಾ ?

Sri H. SIDDAVEERAPPA.—I have already stated that, when the Grow More Food Scheme was under discussion. I have got a list here and, if the Member wants, I am prepared to give it to him. But if the Chair permits I will read it. It is a very long one.

Mr. SPEAKER.—No; it is a very long one I know.

ಶ್ರೀ ಡಿ. ಆರ್. ಕರಿಗೌಡರು.—ಮೈನೂರು ದೇಶದಲ್ಲಿ ಎಲೆಕ್ಟ್ರಿಕ್ ಲಿಫ್ಟ್ ಇರಿಗೇಷನ್ ಪಂಪುಗಳಿಗಾಗಿ $2\frac{1}{2}$ ಕೋಟಿ ರೂಪಾಯಿಗಳನ್ನು ಕೊಟ್ಟಿದೆಯೆಂದು ಹೇಳಿದ್ದೀರಿ. ಈ ಪೈಕಿ ನಮ್ಮ ಹಾಸನ ಜಿಲ್ಲೆಗೆ ವರ್ಷಕ್ಕೆ 70,000-75,000 ರೂಪಾಯಿಗಳನ್ನಾದರೂ ಖರ್ಚುಮಾಡಬೇಕೆಂದು ಯೋಚನೆಮಾಡುತ್ತೀರಾ ?

Sri H. SIDDAVEERAPPA.—I agree with my friend that good things in life must be shared equitably and by all.

ಶ್ರೀ ಡಿ. ಆರ್. ಕರಿಗೌಡರು.—ಲಿಫ್ಟ್ ಇರಿಗೇಷನ್ನಿಗೆ ಹೆಚ್ಚಿಗೆ ಏರ್ಪಾಡುಮಾಡಿದರೆ ರೈತರು ಹೆಚ್ಚಿಗೆ ಬೆಳೆಯುವುದಕ್ಕೆ ಅನುಕೂಲವಾಗುತ್ತದಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೌದು.

ಶ್ರೀ ಡಿ. ಆರ್. ಕರಿಗೌಡರು.—ಹಾಸನ ಡಿಸ್ಟ್ರಿಕ್ಟಿನಲ್ಲಿ ಲಿಫ್ಟ್ ಇರಿಗೇಷನ್ನಿಗೆ ಹೆಚ್ಚಿಗೆ ಸಹಾಯಮಾಡುವುದಕ್ಕೆ ಏರ್ಪಾಡುಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಆ ಲೋಚನೆ ಮಾಡೋಣ.

Sri Mulka GOVINDA REDDY (Chitaldrug).—Will the Government be pleased to state whether these amounts were paid by the Central Government on the request of the Mysore Government or on the demand of the Mysore Government ?

Sri H. SIDDAVEERAPPA.—Both mean one and the same thing. They are like the two faces of a coin.

Sri Mulka GOVINDA REDDY.—Can any self-respecting Government tolerate requesting for help from other Governments ?

Sri H. SIDDAVEERAPPA.—"Request" is a general term used in all civilized countries.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—1951-52ರಲ್ಲಿ 38 ಲಕ್ಷ ರೂಪಾಯಿಗಳು ಖರ್ಚಾಗಿವೆಯೆಂದು ಹೇಳಿದ್ದೀರಿ. ಇದು ಗ್ರಾಂಟಿನಿಂದ ಖರ್ಚಾಗಿರುವುದೇ ಅಥವಾ ಲೋನಿನಿಂದ ಖರ್ಚಾಗಿರುವುದೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಎರಡರಲ್ಲೂ ಖರ್ಚಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಉಳಿದ ದುಡ್ಡು ಏನಾಯಿತು ?

ಶ್ರೀ ಎಚ್. ಸಿದ್ದವೀರಪ್ಪನವರು.—ಆಗಲೇ ಹೇಳಿದ್ದೇನೆ.

ಶ್ರೀ ಬಿ. ಹುಚ್ಚೇಗೌಡರು.—ಇನ್ನು ಒಂದು ತಿಂಗಳಿನಲ್ಲಿ ಖರ್ಚುಮಾಡುವುದಕ್ಕಾಗುವುದಿಲ್ಲವಲ್ಲಾ, ಏನು ಮಾಡುತ್ತೀರಿ ?

Sri H. SIDDAVEERAPPA.—I have already said that even if the amount lapses, Government will utilise it for the purpose for which it was allotted.

ಶ್ರೀ ಬಿ. ಹುಚ್ಚೇಗೌಡರು.—ಅದು ಇಂಡಿಯಾ ಸರ್ಕಾರದವರ ಗ್ರಾಂಟ್ ಅಲ್ಲವೇ ? ಸಾಧಾರಣವಾಗಿ ಅದು ಮಾರ್ಚ್ ತಿಂಗಳಿಗೆ ಲ್ಯಾಪ್ಸ್ ಆಗುತ್ತದಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ನಾನು ಆಗಲೇ ಹೇಳಿದ್ದೇನೆ; ನಮ್ಮ ಹತ್ತಿರ ಹಣವಿದೆ.

ಶ್ರೀ ಬಿ. ರಾಚಯ್ಯನವರು (ಯಳಂದೂರು-ಅನುಸೂಚಿತ ಜಾತಿಗಳು).—ಈ ಹಣದಲ್ಲಿ ಆಹಾರವನ್ನು ನಬ್ಸಿಡೈಸ್‌ಮಾಡುವುದಕ್ಕೇನಾದರೂ ಹಣ ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲವಲ್ಲ!

ಶ್ರೀ ಎನ್. ಎಂ. ಮರಿಯಪ್ಪನವರು (ಪೆರಿಯಾಪಟ್ಟಣ).—ನೀರಾವರಿ ಸೌಕರ್ಯಗಳಿಗಾಗಿ ಅವರು ಕೊಟ್ಟಿರುವುದು ಬಹಳ ಕಡಮೆಯಲ್ಲವೇ ?

Sri H. SIDDAVEERAPPA.—For another scheme of things they say Rs. 250 must be given They also say even that will have to be stopped.

ಶ್ರೀ ಎನ್. ಎಂ. ಮರಿಯಪ್ಪನವರು.—ಇದನ್ನು ಇನ್ನೂ ಹೆಚ್ಚುಮಾಡುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—ನಮ್ಮ ಹಣಕಾಸಿನ ಸ್ಥಿತಿ ಅವಕಾಶ ಕೊಟ್ಟರೆ ಮಾಡುತ್ತೇವೆ.

Breached Tanks under restoration in Malur Taluk.

Q.—28. **Sri H. C. LINGA REDDY** (Malur).—

Will the Government be pleased to state :—

(*a*) the number of minor and major tanks in Malur Taluk ;

(*b*) out of them, the number that are breached ;